# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,

# ಶಹಾಪೂರ

ಸಿ.ಡಬ್ಲ್ಯೂ.1

## PCR 1/2021

| | | |
|---|---|---|
| ಹೆಸರು | ಃ | ಲಕ್ಷ್ಮೀ @ ಅಂಜುಲಾ |
| ಗಂಡನ ಹೆಸರು | ಃ | ತ್ಯಾಗರಾಜ |
| ವಯಸ್ಸು | ಃ | 26 ವರ್ಷ |
| ಉದ್ಯೋಗ | ಃ | ಹೊಲಮನೆ ಕೆಲಸ |
| ವಾಸ | ಃ | ಮೂಡಬುಳ ಹಾಲಿ ವಸತಿಃ ಶೆಟ್ಟಿಕೇರಾ |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 09-10-2023
ಪಿರ್ಯಾದಿದಾರಳ ಪ್ರಮಾಣಪೂರ್ವಕ ಹೇಳಿಕೆ

ನನ್ನ ತವರು ಮನೆ ಶೆಟ್ಟೇಕೇರಾ ಗ್ರಾಮ ಇರುತ್ತದೆ. ನನ್ನ ಮದುವೆ 1 ನೇ ಆರೋಪಿ ತ್ಯಾಗರಾಜ ಇವರ ಜೊತೆ 5 ವರ್ಷಗಳ ಹಿಂದೆ ಮೂಡಬುಳ ಗ್ರಾಮದಲ್ಲಿ ಆಗಿರುತ್ತದೆ. ಮದುವೆಯಾದ ಮೇಲೆ 2 ವರ್ಷಗಳವರೆಗೆ ಸರಿಯಾಗಿ ಉಳಿದಿದ್ದೇವು. 2 ವರ್ಷದ ನಂತರ ನನಗೆ ಒಂದು ಗಂಡು ಮಗು ಜನಿಸಿತು. ಆ ಮೇಲೆ ಎದ್ರುದಾರ ಸರಾಯಿ ಕುಡಿದು ನನಗೆ ಹೊಡೆ ಬಡೆ ಮಾಡಲು ಪ್ರಾರಂಭಿಸಿದ ಮತ್ತು ನನ್ನ ಜೊತೆ ಕಿರಿಕಿರಿ ಮಾಡುತ್ತಿದ್ದ. ರೂ.1,00,000/- ಮತ್ತು ಐದು ತೊಲೆ ಬಂಗಾರ ತವರು ಮನೆಯಿಂದ ತರುವಂತೆ ಹೇಳಿ ನನಗೆ ಕಿರಿಕಿರಿ ಮಾಡುತ್ತಿದ್ದ. ನನ್ನ ತವರು ಮನೆಯವರು ಬಡುವರಿದ್ದ ಕಾರಣ ನಾನು ಅವರಿಂದ 5 ತೊಲೆ ಬಂಗಾರ ಮತ್ತು ರೂ.1,00,000/- ತರುವುದಿಲ್ಲ ಎಂದು ಹೇಳಿದೆ.

2. ನಂತರ ಈಗ 3 ವರ್ಷಗಳ ಹಿಂದೆ ಒಂದು ದಿನ ನನಗೆ ನನ್ನ ಅತ್ತೆ ನಿಜಲಿಂಗಮ್ಮ, ನನ್ನ ಮಾವ ಬೀರಪ್ಪ, ನನ್ನ ಗಂಡ ತ್ಯಾಗರಾಜ ಮೈದುನ ಅನಂತನಾಗ ಮತ್ತು ಮೇಘರಾಜ ಇವರುವುಗಳು ನನಗೆ ಕಿರಿಕಿರಿ ಮಾಡಿ ಮನೆಯಿಂದ ಹೊರ ಹಾಕಿರುತ್ತಾರೆ. ನಾನು ಮತ್ತು ನನ್ನ ಮಗು ನನ್ನ ತವರು ಮನೆಗೆ ಹೋಗಿ ಉಳಿದಿರುತ್ತೇವೆ. ನಾನು ಅಲ್ಲಿ ತವರು ಮನೆಯಲ್ಲಿರುವಾಗ ಒಂದನೇ ಆರೋಪಿ ತ್ಯಾಗರಾಜನಿಗೆ ಎರಡನೇ ಮದುವೆ ಮಾಡಲಾಗಿದೆ. ಎರಡನೇ ಆರೋಪಿ ಸುಮಂಗಲಾ ಒಂದನೇ ಆರೋೇಪಿತನ 2 ನೇ ಹೆಂಡತಿಯಾಗಿರುತ್ತಾಳೆ. ಒಂದು ಮತ್ತು 2 ನೇ ಆರೋಪಿತರ ಮದುವೆ 3 ರಿಂದ 8 ನೇ ಆರೊಪಿತರು ಮತ್ತು ಒಬ್ಬ ಸಿದ್ದಪ್ಪ ಎನ್ನುವವರು ಸೇರಿ ಮಾಡಿರುತ್ತಾರೆ. ಆ ಮದುವೆ ಭೀಮರಾಯಣಗುಡಿ ಗ್ರಾಮದಲ್ಲಿನ

ಆಂಜನೇಯ ದೇವಸ್ಥಾನದಲ್ಲಿ ನಡೆದಿರುತ್ತದೆ ಎಂದು ನನಗೆ ನನ್ನ ತಾತಾ ಖತಲಪ್ಪ ಇವರು ಹೇಳಿರುತ್ತಾರೆ. ಸದ್ರಿ ಖತಲಪ್ಪ ಇವರು ಆಂಜನೇಯ ದೇವಸ್ಥಾನಕ್ಕೆ ದರ್ಶನಕ್ಕೆ ಹೋಗಿದ್ದಾಗ ಅಲ್ಲಿ ಒಂದು ಮತ್ತು 2 ನೇ ಆರೋಪಿತರ ಮದುವೆ ನಡೆಯುತಿದ್ದುದ್ದನ್ನು ನೋಡಿ ನನಗೆ ತಿಳಿಸಿರುತ್ತಾರೆ. ನನ್ನ ತಾತ ಖತಲಪ್ಪ ಇವರು 1 ಮತ್ತು 2 ನೇ ಆರೋಪಿತರ ಮದುವೆ ತಡೆಯಲು ಪ್ರಯತ್ನಿಸಿದ್ದರೂ ಸಹ ಅವರಿಗೆ ಜಗಳ ಮಾಡಿ ವಾಪಸ್ ಕಳುಹಿಸಿರುತ್ತಾರೆ.  ನನ್ನ ತಾತ ನಮ್ಮ ಊರಿಗೆ ಬಂದ ನಂತರ 1 ನೇ ಆರೋಪಿ 2 ನೇ ಮದುವೆ ಮಾಡಿಕೊಂಡ ಬಗ್ಗೆ ನನಗೆ ತಿಳಿಸಿರುತ್ತಾರೆ. ಮೂಡಬುಳದಲ್ಲಿನ ಹಿರಿಯರಿಗೆ ಆ ಬಗ್ಗೆ ವಿಚಾರಿಸಿದರೂ ಸಹ ಅವರು ನನ್ನ ಮಾತು ಕೇಳಿಸಿ ಕೊಂಡಿರುವುದಿಲ್ಲ. ನಂತರ ನಾವು ದೂರು ದಾಖಲಿಸಲು ಬಿ. ಗುಡಿ ಪೊಲೀಸ್ ಠಾಣೆಗೆ ಹೋಗಿದ್ದಾಗ ಅವರು ಕೊರ್ಟ ಗೆ ಹೋಗಿ ದೂರು ದಾಖಲಿಸುವಂತೆ ಹೇಳಿದರು.

ಮುಂದುವರೆದ ಹೇಳಿಕೆಗಾಗಿ  ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು.
ಪ್ರ.ದ.ನ್ಯಾ.ದಂ. ಶಹಾಪೂರ.